ಬೈಂದೂರು ಬಳಿ ಬಾಕ್ಸೈಟ್ ನಿಕ್ಷೇಪ

೧೩೩೦. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಬಳಿಯ ಬಾಕ್ಸೈಟ್ ನಿಕ್ಷೇಪದಿಂದ ಅದುರು ತೆಗೆಯುವುದನ್ನು ನಿಲ್ಲಿಸಲು ಕಾರಣವೇನು ?

ಆ) ಆ ಅದುರನ್ನು ಬಳಸಿ ಸ್ಥಳೀಯವಾಗಿ ಉದ್ದಿಮೆ ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ ?

ಶ್ರೀ ರಮೇಶ್ ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

ಅ) ಬಾಕ್ಸೈಟ್ ಅದಿರಿಗೆ ಸಧ್ಯದಲ್ಲಿ ಬೇಡಿಕೆ ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ಅದುರು ತೆಗೆಯುವುದನ್ನು ನಿಲ್ಲಿಸಲಾಗಿದೆ.

ಆ) ಸರ್ಕಾರದ ವತಿಯಿಂದ ಬಾಕ್ಸೈಟ್ ಅದಿರನ್ನು ಬಳಸಿ ಯಾವ ಉದ್ದಿಮೆಯನ್ನೂ ಸ್ಥಾಪಿಸುವ ಯೋಜನೆ ಸಧ್ಯಕ್ಕೆ ಇಲ್ಲ.

ಶ್ರೀ ಜಿ. ಎಸ್. ಆಚಾರ್.— ಬೈಂದೂರು ಬಳಿ ವಿಫುಲವಾಗಿ ಬಾಕ್ಸೈಟ್ ಇರುವುದರಿಂದ ಇದನ್ನು ಉಪಯೋಗಿಸಿಕೊಂಡು ಯಾವುದಾದರೂ ಉದ್ಯಮವನ್ನು ತೆಗೆಯುವ ಯೋಚನೆ ಏನಾದರೂ ಸರ್ಕಾರಕ್ಕೆ ಇದೆಯೇ ? ಏಕೆಂದರೆ ಅದಿರು ತೆಗೆಯುತ್ತಿದ್ದಾಗ ನೂರಾರು ಜನರಿಗೆ ಅಲ್ಲಿ ಉದ್ಯೋಗದ ಅವಕಾಶ ಲಭಿಸಿತ್ತು. ಆದ್ದರಿಂದ ಇಂಥ ಉದ್ಯಮವನ್ನು ತೆಗೆಯಲಿಕ್ಕೆ ಸರ್ಕಾರ ಏನಾದರೂ ಅಲ್ಲಿ ಪರಿಶೀಲನೆ ನಡೆಸಿದೆಯೇ ? ಎರಡನೆಯದಾಗಿ ಕರ್ನಾಟಕದಲ್ಲಿ ಹೊರಗಡೆ ಇರತಕ್ಕಂಥ ಉದ್ಯಮಗಳಿಗೆ ಈ ಅದಿರನ್ನು ಕಳುಹಿಸಲಿಕ್ಕೆ ಕೇವಲ ವಿದೇಶಗಳಿಗೆ ಮಾತ್ರ ಅಲ್ಲ, ಇಲ್ಲಿನ ಉದ್ಯಮಗಳಿಗೆ ಅದಿರನ್ನು ಕಳುಹಿಸಲಿಕ್ಕೆ ಏನಾದರೂ ಯೋಚನೆ ನಡೆದಿದೆಯೇ ?

ಶ್ರೀ ರಮೇಶ್ ಜಿ. ಜಿಗಜಿಣಗಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಸರ್ಕಾರದ ಮುಂದೆ ಸದ್ಯಕ್ಕೆ ಯಾವ ಕಾರ್ಖಾನೆಯನ್ನು ತೆಗೆಯುವ ಉದ್ದೇಶ ಇಲ್ಲ ಎಂದು ಹೇಳಿದ್ದೇನೆ. ಎರಡನೆಯದು ಈ ಬಾಕ್ಸೈಟ್‌ನ್ನು ಫೈನಲ್ ಪ್ರಾಡಕ್ಟ್ ಮಾಡುವುದಕ್ಕೆ ಜಾಸ್ತಿ ವಿದ್ಯುತ್ ಬೇಕಾಗುತ್ತದೆ. ಉದಾಹರಣೆಗೆ ಪಂದ್ರಾಸ್ ಕಂಪನಿಯವರು ಮೆಟ್ಟೂರ್‌ನಲ್ಲಿ ಮೂರು ಸಾವಿರ ಟನ್‌ನ್ನು ಖರೀದಿ ಮಾಡುತ್ತಿದ್ದರು. ವಿದ್ಯುತ್ ಶಕ್ತಿಯ ಅಭಾವದಿಂದ ಇಂಥ ಕಾರ್ಖಾನೆಗಳು ನಿಂತು ಹೋಗಿವೆ. ಈಗ ಸಧ್ಯಕ್ಕೆ ಅಂಥ ಕಾರ್ಖಾನೆಗಳನ್ನು ಶುರು ಮಾಡುವ ಯೋಚನೆ ಇಲ್ಲ. ಈ ವಿದ್ಯುತ್‌ನ ಒಂದು ಸುಧಾರಣೆಯಾದರೆ ಮುಂದೆ ಅಂಥ ಉದ್ಯಮವನ್ನು ಸ್ಟಾರ್ಟ್ ಮಾಡಬಹುದು ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಹೆಚ್.ಡಿ.ಪಿ. ಪ್ಲಾಸ್ಟಿಕ್ ಪೈಪ್‌ಗಳ ಅಳವಡಿಕೆಯಿಂದಾಗುವ ತೊಂದರೆಯ ಬಗ್ಗೆ

೧೪೪೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಬ್ ಮರ್ಸಿಬಲ್ ಪಂಪು ಹಾಕುವಾಗ ಹೆಚ್.ಡಿ.ಪಿ. ಪ್ಲಾಸ್ಟಿಕ್ ಪೈಪ್ ಕಡ್ಡಾಯವಾಗಿ ಅಳವಡಿಸಲು ಸರ್ಕಾರ ತೀರ್ಮಾನಿಸಿದೆಯೇ ?

ಆ) ಈ ರೀತಿ ಕಡ್ಡಾಯವಾಗಿ ಪೈಪನ್ನು ಹಾಕುವುದರಿಂದ ರೈತರಿಗೆ ಆಗುವ ತೊಂದರೆ ಸರಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಈ ಹಿಂದೆ ಸಬ್ ಮರ್ಸಿಬಲ್ ಪಂಪುಗಳಿಗೂ ಇತರೆ ಪಂಪುಗಳಂತೆ ಹೆಚ್.ಪಿ.ಡಿ.ಇ, ಆರ್.ಪಿ.ವಿ.ಸಿ. ಪೈಪುಗಳನ್ನು ಅಳವಡಿಸುವುದು ಮುಂಡಳಿ ಕಡ್ಡಾಯ ಮಾಡಿತ್ತು.